**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 94/2020**

**ಚಾ.ಸಾಃ 6, ಪ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ನಾಗೇಶ ಮಡಿವಾಳ |
| ತಂದೆಯ ಹೆಸರು | ಮಾದೇವ ಮಡಿವಾಳ |
| ವಯಸ್ಸು | 62 ವರ್ಷಗಳು |
| ಉದ್ಯೋಗ | ಪಾನ್ ಬೀಡಾ ಅಂಗಡಿ, ಅಂಚೆ ಕಚೇರಿ ಬಳಿ, ಹೊನ್ನಾವರ |
| ವಾಸ್ತವ್ಯ | ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 08-12-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದಲ್ಲಿ ಹಾಜರು ಮಾಡಿರುವ ದಿನಾಂಕ 05-08-2020 ರ ಮಾಲು ಜಪ್ತು ಪಂಚನಾಮೆಯ ನೈಜ ಪ್ರತಿಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ಸಾಕ್ಷಿ ತನ್ನದು ಎಂದು ತಿಳಿಸಿರುತ್ತಾರೆ. ಸದರಿ ಪಂಚನಾಮೆಯ ಮೂಲ ಪ್ರತಿಯು ಮೂಲ ಸಿಸಿ ಸಂಖ್ಯೆ:76/2020 ರಲ್ಲಿ ಇದ್ದು ಸದರಿ ಮೂಲ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಮಾಡಿರುವ ನೈಜ ಪ್ರತಿಯ ಜೊತೆ ಹೋಲಿಕೆ ಮಾಡಿ ನೋಡಲಾಗಿ ನೈಜ ಪ್ರತಿಯು ಮೂಲ ಪ್ರತಿಯ ಬರವಣಿಗೆಗೆ ಹೊಂದಾಣಿಕೆಯಾಗಿರುತ್ತದೆ. ಆದ್ದರಿಂದ ಈ ಪ್ರಕರಣದಲ್ಲಿ ಹಾಜರು ಮಾಡಿರುವ ಜಪ್ತು ಪಂಚನಾಮೆಯನ್ನು ನಿಪಿ-6 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ನಾನು ಸುಮಾರು 2-3 ವರ್ಷಗಳ ಹಿಂದೆ ಹೊನ್ನಾವರ ಪೋಲೀಸ್ ಠಾಣೆಯ ಬಳಿ ಮಾಡಿರುತ್ತೇನೆ. ನಿಪಿ-6 ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡುವ ಸಂದರ್ಭದಲ್ಲಿ ಪೋಲಿಸರು ಯಾವುದೇ ವ್ಯಕ್ತಿಗಳನ್ನು ತೋರಿಸಿರುವುದಿಲ್ಲ ಮತ್ತು ಯಾವುದೇ ಆಭರಣಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ.

ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿದ್ದರಿಂದ ಛಾಯಾಚಿತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 05-08-2020 ರಂದು ಪೋಲಿಸರು ನಾನು ಮತ್ತು ಚಾಸಾ-7 ವಿನಾಯಕ ಸುಬ್ರಹ್ಮಣ್ಯ ಭಟ್ಟರನ್ನು ಹೊನ್ನಾವರ ಪೋಲೀಸ್ ಠಾಣೆಗೆ ಬರ ಮಾಡಿಕೊಂಡು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ತೋರಿಸಿ ಅವರು ಕಳುವು ಮಾಡಿದ ಆಭರಣಗಳನ್ನು ಚಾಸಾ-10 ಅನಿಲ್ ಅಣ್ಣಪ್ಪ ಶೇಟ್ ರವರ ಬಳಿ ಅಡವು ಇಟ್ಟಿದ್ದು ಅವುಗಳನ್ನು ಸದರಿ ಚಾಸಾ-10 ಹಾಜರು ಮಾಡುವವರಿದ್ದು ಅದಕ್ಕೆ ಪಂಚರಾಗಲು ಕೋರಿದ್ದರಿಂದ ನಾವು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ತದನಂತರ ಚಾಸಾ-10 ರವರು ಬಂಗಾರದ ಆಭರಣಗಳನ್ನು ಹಾಜರು ಮಾಡಿದರು ಮತ್ತು ಅವುಗಳನ್ನು ಆಭರಣ ಪರೀಕ್ಷಕರಾದ ಚಾಸಾ-11 ದೀಪಕ ಶೇಟ್ ಪರಿಶೀಲಿಸಿದರು ಎಂದರೆ ಸರಿಯಲ್ಲ. ತದನಂತರ ಸದರಿ ಬಂಗಾರದ ಎಲ್ಲಾ ಆಭರಣಗಳನ್ನು ಪೋಲಿಸರು ಜಪ್ತು ಮಾಡಿಕೊಂಡು ಅದಕ್ಕೆ ಸಂಬಂಧಿಸಿದಂತೆ ನಿಪಿ-5 ರ ಪ್ರಕಾರ ಜಪ್ತು ಪಂಚನಾಮೆಯನ್ನು ಜರುಗಿಸಿ ಓದಿ ಹೇಳಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಛಾಯಾಚಿತ್ರಗಳನ್ನು ತೆಗೆಸಿದರು ಎಂದರೆ ಸರಿಯಲ್ಲ. ಆದರೂ ಸಹ ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**